767 ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ ಕ್ಷೇತ್ರ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜುಂಡಪ್ಪ ವರದಿ ಪ್ರಕಾರ 2009–10ನೇ ಸಾಲಿನಲ್ಲಿ ಇಲಾಖಾವಾರು ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ ;

ಆ) ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣವೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು) :

ಅ) ಹೌದು, ಎರಡರಿಂದ ಮೂರು ಇಲಾಖೆಗಳನ್ನು ಹೊರತುಪಡಿಸಿ.

ಆ) ಅನ್ವಯಿಸುವುದಿಲ್ಲ.

240 ಶ್ರೀ ಈಶ್ವರ್ ಬೀಮಣ್ಣ ಖಂಡ್ರೆ : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಮುಂಬರುವ ದಿನಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಆ) ಇದಕ್ಕಾಗಿ ಯಾವ ಯಾವ ಗ್ರಾಮಗಳಲ್ಲಿ ಸರ್ವೆ ಕಾರ್ಯ ನಡೆಸಲಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು);

ಇ) ಈ ಯೋಜನೆಗಳ ಕಾರ್ಯಗತಕ್ಕಾಗಿ ಅಗತ್ಯವಿರುವ ಹಣವೆಷ್ಟು; ಇಲ್ಲಿಯವರೆವಿಗೆ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಈ) ಈ ಯೋಜನೆಗಳನ್ನು ಪೂರ್ಣಗೊಳಿಸಿದಾಗ ಇದರಿಂದ ಜಿಲ್ಲೆಯ ಎಷ್ಟು ಎಕರೆ ಪ್ರದೇಶದ ಜಮೀನಿಗೆ ನೀರಾವರಿ ಸೌಲಭ್ಯ ದೊರಕುತ್ತದೆ;

ಉ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರಕ್ಕೆ ಇನ್ನೂ ಎಷ್ಟು ಸಮಯದ ಅಗತ್ಯವಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ 11 ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಹೊಸದಾಗಿ ಯಾವುದೇ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆ ಇರುವುದಿಲ್ಲ.

ಆ), ಇ), ಈ) ಮತ್ತು ಉ) ಹೊಸ ಏತ ನೀರಾವರಿ ಯೋಜನೆಗಳ ಪ್ರಸ್ತಾವನೆ ಇಲ್ಲದಿರುವುದರಿಂದ, ಸರ್ವೆ ಕಾರ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ ಈಶ್ವರ ಬೀಮಣ್ಣ ಖಂಡ್ರೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 240ಕ್ಕೆ ಅನುಬಂಧ

ಕ್ರ ಸಂ	ಯೋಜನೆಯ ಹೆಸರು	ವಿಧಾನ ಸಭಾ ಮತಕ್ಷೇತ್ರ	ನಿರ್ಮಿಸಿದ ವರ್ಷ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಆಚ್ಚುಕಟ್ಟು ಹೆಕ್ಟೇರ್ ಗಳಲ್ಲಿ
ಬೀದರ್ ಜಿಲ್ಲೆ					
1	ಚಿಮಕೊಡ ಏ.ನೀ.ಯೋಜನೆ	ಬೀದರ್	1975	3.70	242
2	ಇಸ್ಲಾಮಪೂರ ಏ.ನೀ.ಯೋ.	ಬೀದರ್	1976	2.60	141
3	ಚಿಲ್ಲರ್ಗಿ ಏ.ನೀ.ಯೋ.	ಬೀದರ್	1980	3.40	242
4	ಶ್ರೀಮಂಡಳ ಏ.ನೀ.ಯೋ.	ಬೀದರ್	1981	4.10	291
5	ಚಾಂಪಡ ಏ.ನೀ.ಯೋಜನೆ.	ಬೀದರ್	2004	73.00 160.00	164
6	ಖಿದವಂತಪೂರ ಏ.ನೀ.ಯೋ.	ಭಾಲ್ಕಿ	1977	1.44	120
7	ನಿಟ್ಟೂರ (ಬಿ) ಏ.ನೀ.ಯೋ.	ಭಾಲ್ಕಿ	1974	3.30	404
8	ಡೊಂಗರಗಿ ಏ.ನೀ.ಯೋ.	ಭಾಲ್ಕಿ	1983	0.41	60
9	ನಿಟ್ಟೂರ (ಕೆ) ಏ.ನೀ.ಯೋ.	ಔರಾದ್	1973	3.83	405
10	ಖಾನಾಪೂರ ಏ.ನೀ.ಯೋ.	ಔರಾದ್	1984	7.13	349
11	ಸೋನಾಲಾ–ಹೊರಂಡಿ ಏ.ನೀ.ಯೋ.	ಔರಾದ್	1984	13.00	808
	ಒಟ್ಟು			275.99	3226